ಮುಂಜಾನೆ ಜಲ್ದಿ ಎದ್ದ ಶಿವಮಲ್ಲಯ್ಯ ತಾತ ಜಳಕ, ಲಿಂಗಪೂಜೆ ಮಾಡಿಕೊಂಡು ಶಿವಸಂಗಪ್ಪನ ಕೊಠಡಿಗೆ ಬಂದ. ಆತ ಎದ್ದಿರಲಿಲ್ಲ. ರಾತ್ರಿ ತನ್ನ ಜತೆ ಮಾತಾಡುತ್ತ ಬಹಳ ಹೊತ್ತು ಎದ್ದಿದ್ದರಿಂದ ಮುಂಜಾನೆ ಜಲ್ದಿ ಎದ್ದಿರಲಿಲ್ಲ. ವಯಸ್ಸೂ ಆಗುತ್ತಿವೆ ಎಂದುಕೊಂಡು ಸಿದ್ರಾಮಪುರಕ್ಕೆ ಹೋಗಲು ತಯಾರಾದ ಅನ್ನುವಾಗ ಶಿವಗೀತ ಬಂದು ನಮಸ್ಕಾರ ಮಾಡಿ 'ತಾತ, ನಿನ್ನೆ ರಾತ್ರಿ ಕನಸ್ಸು ಕಂಡೆ' ಅಂದಳು ಬೆರಗಿನಿಂದ.

'ಹ್ಞಾ...! ಮಗಳೇ, ಚಿಂತೆ ಕಾಲ್ದಾಗ ಕನ್ಸು ಕಾಣ್ತೇವಿ! ಕೆಟ್ಟ ಕನ್ಸು ಬಿದ್ದಿಲ್ಲಲ್ಲ...?'


'ಕೆಟ್ಟ ಕನ್ಸು ಅಲ್ಲ ತಾತ. ಕನ್ಸಿನ್ಯಾಗ ನಾನು ಬಸವಣ್ಣನ ಕಲ್ಯಾಣಕ್ಕೆ ಹೋಗಿದ್ದೆ.'

'ಶಿವಬಸವ... ಶಿವಬಸವಾ... ಎಂಥ ಸಿಹಿ ಸುದ್ದಿಯಿದು! ಬಸವನ ದಯೇ ನಿನ್ನ ಮ್ಯಾಲೆ ಐತೆ' ಅಂದು ಶಿವಗೀತನ ತಲೆಮ್ಯಾಲೆ ಕೈಯಿಟ್ಟು ಹಾರೈಯಿಸಿದ. ಶಿವಗೀತ ಕಂಡ ಕನ್ಸು ಹೇಳಿದಳು. ತಾತ ಹಿಗ್ಗಿ, 'ಆನಂದದಿಂದ ಇರು ಮಗ್ಳೆ. ಎಲ್ಲ ಒಳಿತಾಗತದ ನೋಡ್ತೀರು...'

'ತಾತ, ಬಸವಪುರದಿಂದ ಬಂಡಿ ಬಂದದ ನಿನ್ನ ಕರಿಯಾಕ' ಎಂದು ಶಿವಬಸವನೇ ಬಂದು ಹೇಳಿದ. ತಾತನಿಗೆ ಆ ಕ್ಷಣವೇ ಮಲ್ಲಿಕಾರ್ಜುನಪ್ಪ ನೆನಪಾದ. ಹಿಂದೆ ಮುಂದೆ ಯೋಚಿಸದೆ ಬಂಡಿ ಹತ್ತಿ ಕುಂತ.

* * *

ಆದೀಶ ಶಿವಗೀತಳನ್ನು ಮದುವೆ ಆಗ್ತೀನಿ ಎಂಬ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಮದುವೆ ಮಾಡ್ರಿ ಎಂದು ಹಟವನ್ನೂ ಮಾಡಲಿಲ್ಲ. ಅಣ್ಣಂದಿರಾದ ಸಿದ್ಧರಾಮ, ವಿರೂಪಾಕ್ಷ, ದೇವರಾಜ ಮೂವರು ಆದೀಶನ ಮ್ಯಾಲೆ ಸಣ್ಣತಮ್ಮ ಎಂದು ಮಮತೆಯಿಟ್ಟುಕೊಂಡಿದ್ದರು. ಕೆಲವು ವರ್ಷ ಹೈದರಾಬಾದಿನಲ್ಲಿ ಶಾಲೆ ಕಲಿತವನೆಂದು ಗೌರವವೂ ಇತ್ತು. ಮೂವರು ಅತ್ತಿಗೆಯವರೂ ಮೈದುನನೆಂಬ ಕಕ್ಕುಲಾತಿ ಉಳ್ಳವರಾಗಿದ್ದರು.



ಆದೀಶನಿಗೆ ಇಪ್ಪತ್ತು ವರ್ಷ ನಡಿತಿದ್ದಂಗೆ ಮದುವೆ ಮಾಡುವ ಮಾತುಕತೆಗಳು ಶುರುವಾದರೂ ಅಪ್ಪ ಮಲ್ಲಿಕಾರ್ಜುನಪ್ಪ, ಅಮ್ಮ ನೀಲಾಂಬಿಕೆ ಇಬ್ಬರು ಒಳ್ಳೆಯ ಮನೆತನ ನೋಡಬೇಕೆಂದು ಅವಸರ ಮಾಡಲಿಲ್ಲ. ವರ್ಷಗಳು ಕಳೆದವು. ಏಳೆಂಟು ತಿಂಗಳಿಂದ ಶಿವಗೀತಳನ್ನು ನೋಡಿದ್ದೇ ಮನಸೋತು ಮಾಡಿದ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಮಲ್ಲಿಕಾರ್ಜುನಪ್ಪ-ನೀಲಾಂಬಿಕೆ ಇಬ್ಬರಿಗೂ ಮಗನ ಮಾತು ಕೇಳಿ ನಗಬೇಕೋ, ಅಳಬೇಕೋ ಎಂಬ ಸ್ಥಿತಿಯಲ್ಲಿ ಬಿದ್ದರು. ಮೂವರು ಅಣ್ಣಂದಿರು ಆಗಾಗ, ಆ ಊರಗೌಡನ ಮಗಳಿದ್ದಾಳಂತ, ಮದುವೆ ಮಾಡ್ಕೊಳ್ಳದಾದರೆ ಮಾತುಕತೆಗೆ ಬರ್ತೀವಿ-ಅಂದಾರೆಂದು, ಹುಡುಗಿಯ ಚಂದದ ಜತೆಗೆ, ಮನೆತನದ ವರ್ಚಸ್ಸು ದೊಡ್ಡದಿದೆ ಎಂದು, ತಾಲ್ಲೂಕದಾಗೇ ಯಾರೂ ಅವರಷ್ಟಿಲ್ಲ ಎಂದು ವಾರಕ್ಕೊಂದು ಸುದ್ದಿ ಹೇಳತೊಡಗಿದ್ದರು. ಅತ್ತಿಗೆಯವರು 'ಎಂಥ ಚಲುವೆ ಬೇಕು ಹೇಳು ಹುಡುಕಿ ತರ್ತೀವಿ' ಎಂದು ಹೇಳುತ್ತ ಅವರೂ ವಾರಕ್ಕೊಂದು ಮನೆಯ ಹುಡುಗಿಯನ್ನು ಹೆಸರಿಸಿ ವರ್ಣನ ಮಾಡುತ್ತಿದ್ದರು.

ಮಲ್ಲಿಕಾರ್ಜುನಪ್ಪ ಶಿವಮಲ್ಲಯ್ಯ ತಾತನ ಮುಂದ ಮಗನ ನಿರ್ಧಾರ ಹೇಳಿ 'ನಮ್ಮ ಮನೆತನದಾಗ ಇಂಥ ಕನ್ಯೆಯನ್ನು ತಂದು ಮದುವೆ ಮಾಡಿಲ್ಲ. ಅದರಾಗ ಆ ಹುಡುಗಿ ರಂಡೆ ಮುಂಡೆ ಆಗ್ಯಾಳ...' ಎಂದು ಹೇಳುತ್ತಿದ್ದಂಗ 'ಮಲ್ಲಪ್ಪ, ಶರಣರ ತತ್ತ್ವದಾಗ ಹೆಣ್ಣುಮಕ್ಕಳಿಗೆ ಆ ಪದ ಬಳಸದಿಲ್ಲ. ಅದು ಪಾಪದ ಮಾತು ಎಂದೇ ತಿಳಿತಾರ. ನೀನೂ ಅನ್ನಬಾರದು' ಎಂದು ನಿಷ್ಠುರವಾಗಿಯೇ ಹೇಳಿಬಿಟ್ಟಿದ್ದ. ಅಂದಿನಿಂದ ಶಿವಗೀತ ವಿಧವೆ ಅನ್ನಲೂ ಅಂಜಿಕೊಂಡು, 'ಶಿವಸಂಗಪ್ಪನ ಸೊಸೆ' ಅನ್ನತೊಡಗಿದ. ಆಗಲೂ ತಾತ 'ಆಗ ಸೊಸೆ ಎಂದು ತಿಳಿದಿದ್ದ. ಈಗ ಮಗಳೇ ಆಗಿದ್ದಾಳೆ' ಎಂದು ಹೇಳಿದ್ದ. ಮಲ್ಲಪ್ಪನಿಗೆ ಕಜೀಲಾಗಿತ್ತು. ಸ್ವಲ್ಪ ದಿನ ಶಿವಮಲ್ಲಯ್ಯ ತಾತನ ಸಹವಾಸಕ್ಕೆ ಅಂಜಿದ್ದ. ಆದರೆ ಮಗ ಎಲ್ಲರ ಜತೆ ಮಾತುಬಿಟ್ಟು



